ದೂರವಾಣಿ : 080-27835122
ಫ್ಯಾಕ್ಸ್ : 080-27836569

# ಆನೇಕಲ್ ಯೋಜನಾ ಪ್ರಾಧಿಕಾರ

"ಅಣ್ಣ" ನಂ. 430, ಹೆನ್ನಾಗರ ಗೇಟ್, ಹೊಸೂರು ಮುಖ್ಯರಸ್ತೆ, ಬೆಂಗಳೂರು-560 099.
URL.www.anekal-pa.in, web5.kar.nic.in/e-vinyasa

## ವಸತಿ ಉದ್ದೇಶಕ್ಕಾಗಿ
## ಕರಡು ಅನುಮೋದನಾ ಪತ್ರ
## (ವಿನ್ಯಾಸ ಅಭಿವೃದ್ಧಿಪಡಿಸಲು ಮಾತ್ರ)

**ಸಂಖ್ಯೆ: ಆಯೋಪ್ರಾ/ಎಲ್ಎಓ/193/2013-14** **ದಿನಾಂಕ:** 20 JAN 2018

**ವಿಷಯ:** ಬೆಂಗಳೂರು ನಗರಜಿಲ್ಲೆ, ಆನೇಕಲ್ ತಾಲ್ಲೂಕು, ಕಸಬಾ ಹೋಬಳಿ, ಬ್ಯಾಗಡದೇನಹಳ್ಳಿ ಗ್ರಾಮದ ಸ.ನಂ.86/4ರಲ್ಲಿನ ಒಟ್ಟು 02ಎಕರೆ 31ಗುಂಟೆ ವಿಸ್ತೀರ್ಣದ ಜಮೀನಿನಲ್ಲಿ **ಕರಡು ವಸತಿ ವಿನ್ಯಾಸ** ನಕ್ಷೆಗೆ ಅನುಮೋದನೆ ನೀಡುವ ಬಗ್ಗೆ.

**ಉಲ್ಲೇಖ:**
1. ಶ್ರೀ ಬಿ.ಪಿ.ದಯಾನಂದ, ಶ್ರೀ ರವಿ ಮತ್ತು ಶ್ರೀಮತಿ ಪಿ.ಸುಬ್ಬಮ್ಮ, ಇವರ ಮನವಿ ದಿನಾಂಕ:12.06.2014 ಮತ್ತು ದಿನಾಂಕ:20.07.2017.
2. ದಿನಾಂಕ:22.08.2014ರಂದು ನಡೆದ ಪ್ರಾಧಿಕಾರದ 49ನೇ ಸಭೆಯ ಹೆಚ್ಚುವರಿ ವಿಷಯ ಸಂಖ್ಯೆ:04ರ ನಿರ್ಣಯ.
3. ಪ್ರಾಧಿಕಾರಕ್ಕೆ ಹಣ ಪಾವತಿಸಿದ ಬಗ್ಗೆ ರೂ.2,35,000/-ಗಳ ರಶೀದಿ ಸಂಖ್ಯೆ:300948 ದಿನಾಂಕ:20.10.2014 ಮತ್ತು ಕೆರೆಸಂರಕ್ಷಣಾ ಶುಲ್ಕ ರೂ.2,78,000/-ಗಳ ರಶೀದಿ ಸಂಖ್ಯೆ:300567 ದಿನಾಂಕ:20.10.2014.
4. ಬ್ಯಾಗಡದೇನಹಳ್ಳಿ ಗ್ರಾಮ ಪಂಚಾಯಿತಿ ಕಾರ್ಯಾಲಯ ಪತ್ರದ ದಿನಾಂಕ:28.11.2017.
5. ಆನೇಕಲ್ ಉಪನೊಂದಣಾಧಿಕಾರಿಗಳ ಪತ್ರ ಸಂಖ್ಯೆ: ANK-1-04640-2017-18 ದಿನಾಂಕ:22.11.2017.

*************

ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು, ಕಸಬಾ ಹೋಬಳಿ, ಬ್ಯಾಗಡದೇನಹಳ್ಳಿ ಗ್ರಾಮದ ಸ.ನಂ86/4ರಲ್ಲಿನ ಒಟ್ಟು 02ಎಕರೆ 31ಗುಂಟೆ ಜಮೀನಿಗೆ ವಸತಿ ವಿನ್ಯಾಸ ನಕ್ಷೆ ಅನುಮೋದನೆಯನ್ನು ಉಲ್ಲೇಖ(1)ರಂತೆ ಕೋರಿರುತ್ತಾರೆ. ಉಲ್ಲೇಖ(2)ರ ಪ್ರಾಧಿಕಾರದ ಸಭೆಯಲ್ಲಿ ವಿನ್ಯಾಸ ನಕ್ಷೆ ಅನುಮೋದನೆ ನೀಡಲು ತೀರ್ಮಾನಿಸಲಾಗಿರುತ್ತದೆ. ಹಾಗೂ ಉಲ್ಲೇಖ(3)ರಂತೆ ಶುಲ್ಕ ಪಾವತಿಸಿರುತ್ತಾರೆ. ಉಲ್ಲೇಖ(4)ರಂತೆ ಉದ್ಯಾನವನ ಹಾಗೂ ರಸ್ತೆಗಾಗಿ ಕಾಯ್ದಿರಿಸಿದ ಪ್ರದೇಶವನ್ನು ಬ್ಯಾಗಡದೇನಹಳ್ಳಿ ಗ್ರಾಮ ಪಂಚಾಯಿತಿ ಕಾರ್ಯಾಲಯ, ಕಸಬಾ ಹೋಬಳಿ ಇವರಿಗೆ ಹಾಗೂ ಸಾರ್ವಜನಿಕ ಸೌಲಭ್ಯಕ್ಕಾಗಿ ಕಾಯ್ದಿರಿಸಿದ ಪ್ರದೇಶವನ್ನು ಉಲ್ಲೇಖ(5)ರಂತೆ ಈ ಪ್ರಾಧಿಕಾರಕ್ಕೆ ನೊಂದಾಯಿತ ಪರಿತ್ಯಾಜನ ಪತ್ರದ ಮುಖಾಂತರ ಹಸ್ತಾಂತರಿಸಿರುತ್ತಾರೆ. ಆದ್ದರಿಂದ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 17 (2)ರ ದಿನಾಂಕ:10.09.2015ರ ತಿದ್ದುಪಡಿಯಂತೆ, ವಸತಿ ಬಡಾವಣೆಯನ್ನು ಅಭಿವೃದ್ಧಿಪಡಿಸಲು ಮಾತ್ರ ಈ ಕೆಳಕಂಡ ನಿಬಂಧನೆಗಳಿಗೆ ಒಳಪಟ್ಟು ತಾತ್ಕಾಲಿಕ ಅನುಮೋದನೆ ನೀಡಲಾಗಿದೆ. **ಕರಡು ವಸತಿ ಬಡಾವಣೆಯಲ್ಲಿ ಬರುವ ಎಲ್ಲಾ**

ಕಾಮಗಾರಿಗಳನ್ನು ಪೂರ್ಣಗೊಳಿಸಿ ನಂತರ ಸಂಬಂಧಿಸಿದ ಇಲಾಖೆಗಳಿಂದ ನಿರಾಕ್ಷೇಪಣಾ ಪತ್ರಗಳನ್ನು ಪಡೆದು ಈ ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿದಲ್ಲಿ ವಸತಿ ವಿನ್ಯಾಸ ನಕ್ಷೆಗೆ ವಲಯ ನಿಯಮಾವಳಿಯಂತೆ ಅನುಮೋದನೆ ನೀಡಿ ನಿವೇಶನಗಳನ್ನು ನೊಂದಣಿಗಾಗಿ ಬಿಡುಗಡೆ ಮಾಡಲಾಗುವುದು.

| ಕ್ರ.ಸಂ. | ಷರತ್ತುಗಳು |
|---|---|
| 1. | ಕರಡು ಅನುಮೋದನೆ ನೀಡಿದ ದಿನಾಂಕದಿಂದ ಎರಡು ವರ್ಷದೊಳಗೆ ವಿನ್ಯಾಸವನ್ನು ಸಂಪೂರ್ಣವಾಗಿ ಅಭಿವೃದ್ಧಿಗೊಳಿಸತಕ್ಕದ್ದು, ತಪ್ಪಿದ್ದಲ್ಲಿ ತಾತ್ಕಾಲಿಕ ಅನುಮೋದನೆಯನ್ನು ನವೀಕರಿಸಿಕೊಳ್ಳತಕ್ಕದು. |
| 2. | ಅಂತಿಮ ಹಂತದ ಅಂದರೆ ಶೇ.100ರಷ್ಟು ನಿವೇಶನಗಳನ್ನು ಬಿಡುಗಡೆಗೊಳಿಸುವ ಪೂರ್ವದಲ್ಲಿ ವಿನ್ಯಾಸದಲ್ಲಿ ಎಲ್ಲಾ ಸಿವಿಲ್ ಕಾಮಗಾರಿಗಳಾದ ರಸ್ತೆ, ಚರಂಡಿ, ಒಳಚರಂಡಿ, ನೀರಿನ ಸಂಪರ್ಕ ಹಾಗೂ ಇತರೆ ಕಾಮಗಾರಿಗಳನ್ನು ಪೂರ್ಣಗೊಳಿಸಿರುವ ಬಗ್ಗೆ ಲೋಕೋಪಯೋಗಿ ಒಳನಾಡು ಬಂದರು ಮತ್ತು ಜಲಸಾರಿಗೆ ಇಲಾಖೆಯಿಂದ ಮತ್ತು ಸ್ಥಳೀಯ ಸಂಸ್ಥೆಯಿಂದ ಧೃಡೀಕರಣ ಪತ್ರ ಪಡೆದು ಸಲ್ಲಿಸತಕ್ಕದ್ದು. |
| 3. | ವಸತಿ ವಿನ್ಯಾಸದಲ್ಲಿ ಕಾಯ್ದಿರಿಸಿರುವ ಉದ್ಯಾನವನ ಪ್ರದೇಶಕ್ಕೆ Fencing ಅಳವಡಿಸಿ ಉದ್ಯಾನವನವನ್ನು ಅಭಿವೃದ್ಧಿಪಡಿಸಿ ತೋಟಗಾರಿಕೆ ಇಲಾಖೆಯಿಂದ ಧೃಡೀಕರಣ ಪತ್ರ ಪಡೆದು ಸಲ್ಲಿಸತಕ್ಕದ್ದು. |
| 4. | ಪ್ರಸ್ತಾವಿತ ವಿನ್ಯಾಸದಲ್ಲಿ ಸೂಕ್ತವಾದ ಕಡೆ ಪ್ರಮಾಣೀಕೃತ ರೀತಿಯ ಒಳಚರಂಡಿ ವ್ಯವಸ್ಥೆ ಹಾಗೂ ಶುದ್ಧೀಕರಣ ಘಟಕ (STP)ವನ್ನು ವಿನ್ಯಾಸದಲ್ಲಿ ನಿರ್ಮಾಣ ಮಾಡತಕ್ಕದ್ದು. |
| 5. | ಈ ಪ್ರಾಧಿಕಾರದ ಪೂರ್ವಾನುಮತಿ ಇಲ್ಲದೇ ವಿನ್ಯಾಸದಲ್ಲಿ ಯಾವುದೇ ಬದಲಾವಣೆಯನ್ನು ಮಾಡಬಾರದು. |
| 6. | ಈ ಪ್ರದೇಶದಲ್ಲಿ ಹಾಲಿ ಇರುವ ಗಿಡಮರಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಉಳಿಸಿಕೊಳ್ಳತಕ್ಕದ್ದು ಮತ್ತು ರಸ್ತೆಗಳ ಎರಡೂ ಕಡೆ ಹಾಗೂ ಉದ್ಯಾನವನಗಳಲ್ಲಿ ಹೊಸ ಸಸಿಗಳನ್ನು ಬೆಳೆಸುವುದು. |
| 7. | ಕರಡು ಅನುಮೋದಿತ ವಿನ್ಯಾಸದ ಸೂಕ್ತ ಸ್ಥಳಗಳಲ್ಲಿ Storm Water Pits(SEP) ಮತ್ತು (RP)ಗಳನ್ನು ನಿರ್ಮಿಸಿ ವಿನ್ಯಾಸದಲ್ಲಿ ಮಳೆನೀರು ಸಂಗ್ರಹಣೆ (Rain Water Pits)ಪದ್ಧತಿಯನ್ನು ಕಡ್ಡಾಯವಾಗಿ ಅಳವಡಿಸಿ ಅಂತರ್ ಜಲವೃದ್ಧಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು. |
| 8. | ಕರಡು ಅನುಮೋದಿತ ವಿನ್ಯಾಸದಲ್ಲಿರುವ ರಸ್ತೆಗಳು, ಉದ್ಯಾನವನವನ್ನು ಸಂಪೂರ್ಣವಾಗಿ ಅಭಿವೃದ್ಧಿಪಡಿಸಿ ಈ ಪ್ರಾಧಿಕಾರದಿಂದ ತಿಳಿಸುವವರೆಗೆ ನಿರ್ವಹಣೆಯನ್ನು ಮಾಡತಕ್ಕದ್ದು ಹಾಗೂ ಸಾರ್ವಜನಿಕ ಸೌಲಭ್ಯಕ್ಕೆ ಕಾಯ್ದಿರಿಸಿದ ನಿವೇಶನವನ್ನು ಒತ್ತುವರಿಯಾಗದಂತೆ ಸಂರಕ್ಷಿಸತಕ್ಕದ್ದು. |

9. ಮೇಲ್ಕಂಡ ಯಾವುದೇ ಷರತ್ತುಗಳನ್ನು ಹಾಗೂ ಇತರೆ ಯಾವುದೇ ಇಲಾಖೆಗಳು ವಿಧಿಸುವ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಪ್ರಾಧಿಕಾರವು ನೀಡಿರುವ ಮಂಜೂರಾತಿಯು ಕೂಡಲೇ ರದ್ದಾಗುವುದು.

10. ವಿನ್ಯಾಸದಲ್ಲಿನ ರಸ್ತೆಗಳಿಂದ ಅಕ್ಕ-ಪಕ್ಕದ ಜಮೀನುಗಳಿಗೆ ಇರುವ ಸಂಪರ್ಕವನ್ನು ಯಾವುದೇ ಕಾರಣಕ್ಕೂ ನಿರ್ಬಂಧಿಸತಕ್ಕದ್ದಲ್ಲ.

11. ಈ ಅನುಮೋದನೆಯು ತಾಂತ್ರಿಕವಾಗಿರುವುದರಿಂದ ಇದನ್ನು ಜಮೀನಿನ ಮೇಲಿರುವ ಹಕ್ಕನ್ನು ಅಥವಾ ಮಾಲೀಕತ್ವವನ್ನು ನಿರೂಪಿಸಲು ಉಪಯೋಗಿಸಲು ಬರುವುದಿಲ್ಲ.

12. ಕರಡು ವಸತಿ ಬಡಾವಣೆಯಲ್ಲಿ ವಿಕಲಚೇತನರಿಗೆ ಸುಲಭವಾಗಿ ಸಂಚರಿಸಲು ಅನುಕೂಲವಾಗುವಂತೆ ಪಾದಚಾರಿ ಮಾರ್ಗವನ್ನು ಹಾಗೂ ರಸ್ತೆಗಳನ್ನು ಕಡ್ಡಾಯವಾಗಿ ನಿರ್ಮಿಸತಕ್ಕದ್ದು.

13. ನೈಸರ್ಗಿಕವಾಗಿ ಹರಿಯುವ ನದಿ/ಹಳ್ಳ/ಕೆರೆ ಮುಂತಾದವುಗಳಿಗೆ ವಿನ್ಯಾಸದ ಯಾವುದೇ ಮಲಿನ ನೀರನ್ನು ಬಿಡಬಾರದು.

14. ಈ ಅನುಮೋದಿತ ಕರಡು ವಸತಿ ವಿನ್ಯಾಸ ನಕ್ಷೆ ಪ್ರದೇಶದಲ್ಲಿ ಬರುವ 'ಬಿ' ಖರಾಬು ಜಮೀನುಗಳು ಸರ್ಕಾರಕ್ಕೆ ಸೇರಿರುತ್ತದೆ. ಈ ಜಮೀನುಗಳನ್ನು ಯಥಾಸ್ಥಿತಿಯಂತೆ ಕಾಪಾಡತಕ್ಕದ್ದು ಹಾಗೂ ಅತಿಕ್ರಮಣ ಮಾಡಬಾರದು ಮತ್ತು ಇತರೆ ಉದ್ದೇಶಗಳಿಗಾಗಿ ಉಪಯೋಗಿಸತಕ್ಕದ್ದಲ್ಲ.

15. **ಸದರಿ ಕರಡು ವಸತಿ ವಿನ್ಯಾಸದ ಸುತ್ತಲೂ ಕಾಂಪೌಂಡ್ ನಿರ್ಮಿಸಿ ಗೇಟ್‌ಅನ್ನು ಅಳವಡಿಸಿ ಗೇಟೇಡ್ ಕಮ್ಯೂನಿಟಿ ಎಂಬ ಹೆಸರಿನಲ್ಲಿ ನಿವೇಶನಗಳನ್ನು ಮಾರಾಟ ಮಾಡುವುದನ್ನು ನಿಷೇಧಿಸಲಾಗಿದೆ ಹಾಗೂ ಸದರಿ ವಿನ್ಯಾಸದಲ್ಲಿನ ರಸ್ತೆ, ಪಾದಾಚಾರಿ ಮಾರ್ಗ ಹಾಗೂ ಉದ್ಯಾನವನಗಳು ಸಾರ್ವಜನಿಕ ಸ್ವತ್ತಾಗಿರುತ್ತದೆ. ಆದ್ದರಿಂದ ಸಾರ್ವಜನಿಕ ಸ್ವತ್ತುಗಳನ್ನು ಸಾರ್ವಜನಿಕರಿಗೆ ಮುಕ್ತವಾಗಿಡತಕ್ಕದ್ದು.**

16. ಕರಡು ಅನುಮೋದಿತ ವಿನ್ಯಾಸದಲ್ಲಿ ಬರುವ 18.00ಮೀ. ಗಿಂತ ಹೆಚ್ಚಿನ ಅಗಲದ ರಸ್ತೆಗಳ ಅಕ್ಕ-ಪಕ್ಕದಲ್ಲಿ ಪಾದಚಾರಿ ಮತ್ತು ಸೈಕಲ್ ಟ್ರಾಕ್‌ನ್ನು ಅಳವಡಿಸಿಕೊಳ್ಳತಕ್ಕದ್ದು.

17. ವಿನ್ಯಾಸ ಅಂಗೀಕಾರ ಕೋರಿಕೆ ಸಂಬಂಧ ಸಲ್ಲಿಸಲಾಗಿರುವ ದಾಖಲೆ ಅಥವಾ ಬೇರೆ ಯಾವುದೇ ಮಾಹಿತಿಗಳು ತಪ್ಪಾಗಿದ್ದಲ್ಲಿ ಮೇಲ್ಕಂಡ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಈ ಅನುಮೋದನೆಯು ಯಾವ ಪೂರ್ವ ಸೂಚನೆಯೂ ಇಲ್ಲದೇ ತಂತಾನೆ ರದ್ದಾಗುತ್ತದೆ.

18. ಮೇಲಿನಂತೆ ನೀಡಲಾಗಿರುವ ಅನುಮತಿಗೆ ವ್ಯತಿರಿಕ್ತವಾಗಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ವಿಧಿ ಕಲಂ 17(4) ರಂತೆ ಕ್ರಮ ಜರುಗಿಸಲಾಗುವುದು.

19. ಪ್ರಸ್ತಾವಿತ ವಿನ್ಯಾಸದಲ್ಲಿ ಸೂಕ್ತವಾದ ಕಡೆ ಪ್ರಾಮಾಣೀಕೃತ ರೀತಿಯಲ್ಲಿ ಸೀವೇಜ್ ಟ್ರೀಟ್‌ಮೆಂಟ್ ಪ್ಲಾಂಟ್‌ಅನ್ನು ಸ್ಥಾಪಿಸಬೇಕು ಮತ್ತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಷರತ್ತುಗಳನ್ನು ತಪ್ಪದೇ ಅನುಸರಿಸತಕ್ಕದ್ದು.

20. ಕರಡು ವಸತಿ ಬಡಾವಣೆಯ ಮುಖ್ಯ ದ್ವಾರಗಳಲ್ಲಿ ನೀರು ರಸ್ತೆಗೆ ಹರಿದು ಬರದಂತೆ ಚರಂಡಿ ನಿರ್ಮಿಸಿ ಅದರ ಮೇಲೆ ಸೂಕ್ತ ವ್ಯವಸ್ಥೆ (COWCATCHERS)ಗಳನ್ನು ಅಳವಡಿಸುವಂತೆ ಮತ್ತು ಬಡಾವಣೆಯ ದ್ವಾರದಿಂದ ರಸ್ತೆಯ ಅಂಚಿನವರೆಗೆ ರಸ್ತೆಯನ್ನು ಎತ್ತರಿಸದಂತೆ ಸೂಚಿಸಲಾಗಿದೆ.

21. ಸದರಿ ಜಮೀನಿಗೆ ಸಂಬಂಧಿಸಿದಂತೆ ಯಾವುದೇ ಸಿವಿಲ್ ವ್ಯಾಜ್ಯಗಳಿಗೆ ಪ್ರಾಧಿಕಾರವು ಜವಾಬ್ದಾರಿಯಾಗಿರುವುದಿಲ್ಲ.

22. ವಿನ್ಯಾಸ ಅಭಿವೃದ್ಧಿಪಡಿಸುವ ಪ್ರದೇಶದಲ್ಲಿ ಪ್ರಕಟಣಾ ಫಲಕ ಅಳವಡಿಸಿ ಅದರಲ್ಲಿ ಕರಡು ವಿನ್ಯಾಸ ನಕ್ಷೆ ಹಾಗೂ ಅನುಮೋದನೆ ಸಂಖ್ಯೆ ಮತ್ತು ದಿನಾಂಕವನ್ನು ಪ್ರಕಟಿಸತಕ್ಕದ್ದು.

23. ರೇರಾ ಪ್ರಾಧಿಕಾರದಿಂದ ನಿಯಮಾನುಸಾರ ನೋಂದಣಿ ಮಾಡಿಸಿಕೊಳ್ಳತಕ್ಕದ್ದು.

20/01/18

**ಸದಸ್ಯ-ಕಾರ್ಯದರ್ಶಿ ಹಾಗೂ ನಗರ ಮತ್ತು**
**ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,**
ಆನೇಕಲ್ ಯೋಜನಾ ಪ್ರಾಧಿಕಾರ,
ಆನೇಕಲ್.

ಪ್ರತಿಯನ್ನು ಮಾಹಿತಿಗಾಗಿ:

1. ಶ್ರೀ ಬಿ.ಪಿ.ದಯಾನಂದ, ಶ್ರೀ ರವಿ ಮತ್ತು ಶ್ರೀಮತಿ ಪಿ.ಸುಬ್ಬಮ್ಮ, ನಂ.238, 8ನೇ ಕ್ರಾಸ್, ವೆಂಕಟಾಪುರ, ಕೋರಮಂಗಲ 1ನೇ ಬ್ಲಾಕ್, ಬೆಂಗಳೂರು-560 034.
2. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಬ್ಯಾಗಡದೇನಹಳ್ಳಿ ಗ್ರಾಮ ಪಂಚಾಯಿತಿ ಕಾರ್ಯಾಲಯ, ಕಸಬಾ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರಜಿಲ್ಲೆ-562 106. ಇವರಿಗೆ ವಿನ್ಯಾಸದ ಪ್ರತಿಗಳೊಂದಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗಿದೆ.
3. ಕಛೇರಿ ಪ್ರತಿ.

(ಲೋಕೋಪಯೋಗಿ ಇಲಾಖೆ)

ದೂರವಾಣಿ:-080-27859482 Email:-aeepwdsub562106@gmail.com

ಸಂಖ್ಯೆ:- ಸಕಾಇಂ/ಲೋಉವಿ/ಆನೇಕಲ್/ಬಡಾವಣೆ/ದೃಡೀಕರಣ/2018-19. 93

ಸಹಾಯಕ ಕಾರ್ಯನಿರ್ವಾಹಕ ಇಂಜನೀಯರ್
ಲೋಕೋಪಯೋಗಿ ಬಂದರು ಮತ್ತು ಒಳನಾಡು
ಜಲಸಾರಿಗೆ ಇಲಾಖೆ ಉಪ - ವಿಭಾಗ ಆನೇಕಲ್
ಇವರ ಕಾರ್ಯಾಲಯ ದಿನಾಂಕ:- 05-04-18

ರವರಿಗೆ,

ಶ್ರೀ.ಬಿ.ಪಿ.ದಯಾನಂದ, ಶ್ರೀ ರವಿ ಮತ್ತು ಶ್ರೀಮತಿ ಪಿ.ಸುಬ್ಬಮ್ಮ,
ನಂ.238, 8ನೇ ಕ್ರಾಸ್ ವೆಂಕಟಾಪುರ, ಕೊರಮಂಗಲ, 1ನೇ ಬ್ಲಾಕ್,
ಬೆಂಗಳೂರು-560034.

ಮಾನ್ಯರೆ,

ವಿಷಯ :- ನಿರಾಕ್ಷೇಪಣಾ ಪತ್ರ ನೀಡುವ ಬಗ್ಗೆ.

ಉಲ್ಲೇಖ:-1. ಬಿ.ಎಂ.ಆರ್.ಡಿ.ಎ/ಆ.ಯೋ.ಪ್ರಾ/ಎಲ್.ಎ.ಓ/193/2013-14, ದಿನಾಂಕ:20-01-2018.
2. ತಮ್ಮ ಮನವಿ ಪತ್ರದ ದಿನಾಂಕ: 28-03-2018.

********

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ ತಮ್ಮ ಮನವಿಯ ಮೇರೆಗೆ ಆನೇಕಲ್ ತಾಲ್ಲೂಕು, ಕಸಬಾ ಹೋಬಳಿ, ಬ್ಯಾಗಡದೇನಹಳ್ಳಿ ಗ್ರಾಮದ ಸರ್ವೆ ನಂ.86/4ರಲ್ಲಿನ ಒಟ್ಟು 02 ಎಕರೆ 31 ಗುಂಟೆ ಪ್ರದೇಶಕ್ಕೆ ಸಂಬಂದಿಸಿದಂತೆ ಆನೇಕಲ್ ಯೋಜನಾ ಪ್ರಾಧಿಕಾರದಪತ್ರದ ಸಂಖ್ಯೆ:BMRDA/ಆ.ಯೋ.ಪ್ರಾ/ಎಲ್.ಎ.ಓ/193/2013-14,ದಿನಾಂಕ:-20-01-2018ರಂದು ಮಂಜೂರಾಗಿರುವ ಖಾಸಗಿ ವಸತಿ ಬಡಾವಣೆಯನ್ನು ದಿನಾಂಕ: 05-04-2018ರಂದು ಪರಿವೀಕ್ಷಿಸಲಾಯಿತು.

ಸದರಿ ವಸತಿ ಬಡಾವಣೆಯಲ್ಲಿ ರಸ್ತೆ, ಚರಂಡಿ ಮತ್ತು ಮೋರಿಗಳನ್ನು ಆನೇಕಲ್ ಯೋಜನಾ ಪ್ರಾಧಿಕಾರದದಿಂದ ಮಂಜೂರಾಗಿರುವ ನಕ್ಷೆಯಂತೆ ನಿರ್ಮಿಸಿಲಾಗಿರುತ್ತದೆ.

ತಮ್ಮ ವಿಶ್ವಾಸಿ
ಸಹಿ/-

ಸಹಾಯಕ ಕಾರ್ಯನಿರ್ವಾಹಕ ಇಂಜನೀಯರ್
ಲೋಕೋಪಯೋಗಿ ಬಂದರು,ಮತ್ತು ಒಳನಾಡು
ಜಲಸಾರಿಗೆ ಇಲಾಖೆ ಉಪ-ವಿಭಾಗ ಆನೇಕಲ್

ಪ್ರತಿಯನ್ನು:-
1). ಸದಸ್ಯ ಕಾರ್ಯದರ್ಶಿಗಳು, ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್ ರವರ ಮಾಹಿತಿಗಾಗಿ.

ಸಹಾಯಕ ಕಾರ್ಯನಿರ್ವಾಹಕ ಇಂಜನೀಯರ್
ಲೋಕೋಪಯೋಗಿ ಬಂದರು,ಮತ್ತು ಒಳನಾಡು
ಜಲಸಾರಿಗೆ ಇಲಾಖೆ ಉಪ-ವಿಭಾಗ ಆನೇಕಲ್